
ವಿವೇಕವನ್ನು ದಕ್ಕಿಸಿಕೊಳ್ಳುವಾಗಲೇ ಕಥೆ ಜಾರಿಕೆಯ ಹಂತಕ್ಕೆ ತಲುಪುತ್ತದೆ. ಇದೇ ಮಾತನ್ನು 'ಹುಚ್ಚಯ್ಯನ ಲೀಲೆ' ಕಥೆಗೂ ಹೇಳಬಹುದು. ತಂತ್ರದ ದೃಷ್ಟಿಯಿಂದ 'ಚುಕ್ಕಿ ಹೇಳಿದ ಕಥೆ' ಮುಖ್ಯವಾದರೂ, ಅಲ್ಲಿಯೂ ಅಮೂರ್ತತೆಯ ಗರ್ಭದಲ್ಲಿ ಜೀವಂತಿಕೆ ಕಾಣಲಾರೆವು. ಅನಿಲ್ ಇದರಿಂದ ತಪ್ಪಿಸಿಕೊಳ್ಳುವ ಯತ್ನವನ್ನು 'ಲಿಂಗಾಯತ ಖಾನಾವಳಿ' ಕಥೆಯಲ್ಲಿ ಮಾಡುತ್ತಾರೆ. ಮನುಷ್ಯರಿಗೆ ನಿರ್ದಿಷ್ಟ ಮಾನಸಿಕಲೋಕದಿಂದ ಹೊರಬರುವ ದಾರಿಗಳನ್ನು ಇದರಲ್ಲಿ ಕಾಣಬಹುದು. ಇವರೆಲ್ಲರಿಗೂ ಅಗತ್ಯವಾಗಿ ಬೇಕಾದುದು ಸಾಮಾಜಿಕ ಪ್ರಜ್ಞೆ. ಘಟನೆ ಮತ್ತು ಸಂಗತಿಗಳನ್ನು ನಿರೂಪಣೆಯ ಆವರಣಕ್ಕೆ ತರುವಾಗ ಎಚ್ಚರ ಅಗತ್ಯ. ಕೆಲವೊಮ್ಮೆ ಸಂಗತಿಗಳನ್ನು ಶಕ್ತಿಯುತ ಘಟನೆಗಳನ್ನಾಗಿ ಪರಿವರ್ತಿಸುವ ತಾಕತ್ತು ಇರಬೇಕು. ನಿತ್ಯದ ಸಂಗತಿಗಳು ಕೆಲಬಾರಿ ಕಥೆಯ ಸ್ವರೂಪವನ್ನು ದಕ್ಕಿಸಿಕೊಳ್ಳಬಹುದು. ಪ್ರಾಯಶಃ ಇವುಗಳಿಂದ ಹಿರಿದಾದ ಕಥನಕ್ರಮ ಹಾಗು ದೊಡ್ಡ ಮಟ್ಟದ ಕಾಣ್ಕೆಯನ್ನು ಧರಿಸಬಹುದು. ಹೊಸಬರ ಕಥನದ ಮತ್ತೊಂದು ಸಮಸ್ಯೆ ಎಂದರೆ, ಸಿದ್ಧ ಪಾತ್ರಗಳು ಪದೇ ಪದೇ ನುಸುಳುವುದು. ಗ್ರಾಮಲೋಕವನ್ನು ಚಿತ್ರಿಸುವಾಗ ಅಥವಾ ಕಾರ್ಪೋರೇಟ್ ಸಂಗತಿಗಳನ್ನು ಅಭಿವ್ಯಕ್ತಿಸುವಾಗ ಒಬ್ಬರ ಪಾತ್ರಗಳು ಇನ್ನೊಬ್ಬರ ಕಥೆಗಳಲ್ಲಿ ಗೋಚರಿಸುವುದು. ಪರಂಪರೆಯ ಮತ್ತು ಸಮಕಾಲೀನ ಕಥೆಗಾರರನ್ನು ಓದದೇ ಇದ್ದಾಗ ಈ ಸವಾಲು ಎದುರಾಗುತ್ತದೆ. ಗಟ್ಟಿ ಬರಹಗಾರನೊಬ್ಬ ತನ್ನ ಕಥೆಗಳ ಸಿದ್ಧಮಾದರಿಗಳನ್ನು ತಾನೇ ಮುರಿಯಬಲ್ಲ. ಇದರ ನಡುವೆ ಹಿಂದಿನ ಜೀವನಕ್ರಮಗಳನ್ನು ಮೀರಿದ ಬದಲಾದ ಬಾಳಾಟಗಳನ್ನು ಕಾಣಬಹುದು. ಸಂಪತ್ ಸಿರಿಮನೆಯ ಕೆಲ ಕಥೆಗಳು 'ಭಾವುಕತೆ' ಮತ್ತು ವೈಚಾರಿಕತೆ'ಯನ್ನು ಸಮಪ್ರಮಾಣದಲ್ಲಿ ಕಾಣುವ ದಾರಿಯಲ್ಲಿವೆ. ಇವರ ಪಾತ್ರಗಳು ವೈದಿಕ-ವೈದಿಕೇತರ ಜೀವನವೆಂಬ ಬೈನರಿಯನ್ನು ತೀರಾ ಸಮಸ್ಯಾತ್ಮಕವೆಂದು ಭಾವಿಸಲಾರವು. ಅಲ್ಲೊಂದು ಬದುಕಿನ ಸಾವಧಾನತೆ, ತೀವ್ರತೆ ತುಂಬಿದ ಪ್ರೀತಿ ಮತ್ತು ದಾಂಪತ್ಯದ ಭಾವುಕತೆಯನ್ನು ನೋಡಬಹುದು. ಅಕಾರಣವಾಗಿ ವೈಚಾರಿಕತೆಯನ್ನು ಸಂಪತ್ ತರುವುದಿಲ್ಲ. 'ಪದಬಂಧ' ಕಥೆ ಬದುಕನ್ನೇ ವಿಚಿತ್ರ ಪದಬಂಧ ಮಾಡಿದೆ. 'ಲೆಟ್ಸ್ ಬ್ರೇಕಪ್', 'ಬೂದು ಬಣ್ಣದ ಮಾನವ' ಇತ್ಯಾದಿ ಕಥೆಗಳಲ್ಲಿ ಪಾತ್ರಗಳು ಸದ್ಯದ ಬದುಕನ್ನು ಅರ್ಥಮಾಡಿಕೊಳ್ಳುವುದು ಭೂತದಲ್ಲಿ ನಡೆಯುವ ಮಾತುಕತೆಗಳಿಂದ. 'ಪತನ' ಕಥೆ ಆಧುನಿಕ ಮನಸ್ಸಿನ ವಿಚಿತ್ರ ಸಂಕಟಗಳು; ಭಾವುಕತೆಯನ್ನು ಕಾಲ ನುಂಗುತ್ತಿರುವ ಹಾದಿಯನ್ನು ಸಶಕ್ತವಾಗಿ ಅಭಿವ್ಯಕ್ತಿಸುತ್ತದೆ. ಸಂಪತ್ ಎದುರಿಸುವ ಸಮಸ್ಯೆ ಎಂದರೆ, ವಿವರಗಳನ್ನು ಅಲ್ಲಲ್ಲಿ ಸಿನಿಮೀಯಗೊಳಿಸುವುದು. ಕಥೆಗೆ ಬೇಕಾಗುವ ಹೊಸ ಬಗೆಯ ನುಡಿಗಟ್ಟನ್ನು ಸಂಪತ್ ರೂಢಿಸಿಕೊಳ್ಳಬಲ್ಲರು ಎಂಬ ವಿಶ್ವಾಸ ಮೂಡಿಸಿದ್ದಾರೆ. ಕಥೆಯ ಆದಿಯನ್ನು ಪ್ರಬುದ್ಧಗೊಳಿಸುವ ಹಾಗೆ ಅಂತ್ಯವನ್ನು ಅವರು ತರೋದಿಲ್ಲ.




ಕಥೆಯ ಒಳಗಡೆ ಸೂಕ್ಷ್ಮತೆಗಳು ಧ್ವನಿಯನ್ನು ಧರಿಸದೇ ಹೋದಾಗ, ಭಾಷೆ ಎಷ್ಟೇ ಸರಾಗತೆ ಪಡೆದರೂ ಪೇಲವವಾಗುತ್ತದೆ. ಮನುಷ್ಯರು ತಮ್ಮ ಜೀವಿತದ ಅರ್ಥಗಳ ಸಂಗಡ ತೀವ್ರತೆಯನ್ನು ಸ್ವೀಕರಿಸಿದಂತೆಲ್ಲ ಭಾಷೆಯೂ ತೀವ್ರವಾಗುತ್ತದೆ. ಕಥನ ಬರಿ ದೃಶ್ಯಗಳಾಗಬಾರದು.

ಶಶಿ ತರೀಕೆರೆ ಮತ್ತು ಇತರ ಕೆಲ ಕಥೆಗಾರರು ಭಾಷೆಯ ಮುಖೇನ ವಸ್ತು ವೈವಿಧ್ಯವನ್ನು ಸಾಧಿಸಿದರೂ, ಗಾಢವಾದ ಬದುಕಿನ ಉತ್ಸಾಹ ಮತ್ತು ಕುತೂಹಲವನ್ನು ತಾರದೇ ಹೋಗುತ್ತಾರೆ. ಒಂದು ರೀತಿಯಲ್ಲಿ 'ಮುಟ್ಟಿದರೆ ಮುನಿಸಾಗುವ' ಕಥೆಗಳಿವು. ಶಶಿಯವರು ಇತ್ತ ನಗರ ಬದುಕನ್ನು ಅತ್ತ ಹಳ್ಳಿಜಗತ್ತನ್ನು ರೂಪಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದಾರೆ. ಅವರ ಕಥನಗಳ ಹೆಣ್ಣುಜಗತ್ತು ಬದುಕಿಗೊಂದು ವಿವೇಕ ತರುವಲ್ಲಿ ಒದ್ದಾಡುತ್ತದೆ. 'ಮುಗಿಲ ಕರೆ', 'ಕಂಟ್ರಿ ಪಿಸ್ತೂಲ್' ಎರಡೂ ಕಥೆಗಳನ್ನು ಜೋಡಿಸಿ ಮತ್ತಷ್ಟು ಗಾಢವಾದ ವಸ್ತುವನ್ನು ಹೆಣೆಯಬಹುದಾಗಿತ್ತು. ಎರಡರಲ್ಲೂ ಭುಜಕೀರ್ತಿ, ಮತ್ತು ಹೆಣ್ಣುಜಗತ್ತು ಖಚಿತವಾದ ಮೌಲ್ಯಗಳ ನಿಲ್ದಾಣಕ್ಕೆ ತಲಪುವುದೇ ಇಲ್ಲ. ಮನುಷ್ಯರ